ಸದರಿ ಸುತ್ತೋಲೆಯ ಪ್ರಕಾರ ಬಯಲು ಸೀಮೆಯ ಮಧ್ಯಮ ಫಲವತ್ತತೆ ಇರುವ ಪ್ರದೇಶಗಳು ಮತ್ತು ಗಡಿನಾಡು ಪ್ರದೇಶದ ಕಡಿಮೆ ಫಲವತ್ತತೆ ಇರುವ ಬೆಟ್ಟ ಪ್ರದೇಶಗಳಲ್ಲಿ ನೀಲಗಿರಿ ಗಿಡಗಳನ್ನು ಬೆಳೆಸಬಹುದಾಗಿರುತ್ತದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಅರಣ್ಯದಲ್ಲಿ ಬೆಂಕಿ

548 (794) ಡಾ. ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಅರಣ್ಯಗಳಾದ ಬಂಡೀಪುರ ಮತ್ತು ನಾಗರಹೊಳೆ ಅರಣ್ಯ ಪ್ರದೇಶಗಳಿಗೆ ಬೆಂಕಿಬಿದ್ದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಅರಣ್ಯಗಳಲ್ಲಿ ಒಟ್ಟು ಎಷ್ಟು ಎಕರೆ ಪ್ರದೇಶಕ್ಕೆ ಬಿದ್ದಿದ್ದು, ಅದರಿಂದ ಇಲಾಖೆಗೆ ಹಾಗೂ ರಾಜ್ಯದ ಬೊಕ್ಕಸಕ್ಕೆ ಎಷ್ಟು ನಷ್ಟವಾಗಿದೆ ಎಂಬುದರ ಬಗ್ಗೆ ಸಮಗ್ರ ಮಾಹಿತಿ ಒದಗಿಸುವುದು;

ಇ) ಅರಣ್ಯ ಪ್ರದೇಶಕ್ಕೆ ಬಿದ್ದ ಬೆಂಕಿಯಿಂದ ಸದರಿ ಇಲಾಖೆಯ ಯಾವ ಯೋಜನೆಗಳಿಗೆ ನಷ್ಟವಾಗಿದೆ ಮತ್ತು ಈ ಯೋಜನೆಗಳ ಮುಂದಿನ ಗತಿಯೇನು ಎಂಬ ಬಗ್ಗೆ ಸಂಪೂರ್ಣ ವಿವರ ನೀಡುವುದು;

ಈ) ನಾಗರಹೊಳೆ ಮತ್ತು ಬಂಡೀಪುರ ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಟೈಗರ್ ಪ್ರಾಜೆಕ್ಟ್‌ಗೆ ಈ ಕಾಡ್ಗಿಚ್ಚಿನಿಂದ ಉಂಟಾಗಿರುವ ತೊಂದರೆಗಳೇನು ಮತ್ತು ಅ ತೊಂದರೆಗಳನ್ನು ಯಾವ ರೀತಿಯಲ್ಲಿ ನಿಭಾಯಿಸಲಾಗಿದೆ ಎಂಬ ಬಗ್ಗೆ ಪೂರ್ಣ ವಿವರ ನೀಡುವುದು;

ಉ) ರಾಜ್ಯದ ಅರಣ್ಯ ಪ್ರದೇಶಕ್ಕೆ ಆಗಿಂದಾಗ್ಗೆ ಬೆಂಕಿ ಬೀಳುತ್ತಿರುವುದು ಕಿಡಿಗೇಡಿಗಳ ಕೃತ್ಯವೊ ಅಥವಾ ಬೇರೆ ಇನ್ನೇನಾದರೂ ಕಾರಣವಿದೆಯೇ ಎಂಬ ಬಗ್ಗೆ ವಿವರ ನೀಡುವುದು;

ಶ್ರೀ ಸಿ.ಪಿ ಯೋಗೇಶ್ವರ (ಅರಣ್ಯ ಸಚಿವರು) :

ಅ) ರಾಷ್ಟ್ರೀಯ ಅರಣ್ಯಗಳಾದ ಬಂಡೀಪುರ ಮತ್ತು ನಾಗರಹೊಳೆ ಅರಣ್ಯ ಪ್ರದೇಶಗಳಿಗೆ ಬೆಂಕಿಬಿದ್ದ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಬೆಂಕಿ ಅನಾಹುತಕ್ಕೆ ಒಳಪಟ್ಟ ರಕ್ಷಿತ ಪ್ರದೇಶದ ವಿವರ ಕೆಳಗಿನಂತಿದೆ.

1. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ – 1961.00 ಹೆ.
2. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ– 998.097 ಹೆ.

ಮೇಲೆ ನಮೂದಿಸಿದ ಒಟ್ಟು 2959.097 ಹೆ. ಪೈಕಿ 2499.097 ಹೆ. ನೆಲ ಮಟ್ಟದ ಬೆಂಕಿ ಉಂಟಾಗಿದ್ದು, ಸದರಿ ಪ್ರದೇಶದಲ್ಲಿ ಒಣಗಿದ, ಹೂಬಿಟ್ಟ ಬಿದಿರು ಇರುವುದಿಲ್ಲವಾದ್ದರಿಂದ ಗಿಡ–ಮರಗಳಿಗೆ, ಪ್ರಾಣಿಗಳಿಗೆ (Flora and fauna) ದೊಡ್ಡ ಪ್ರಮಾಣದ ಹಾನಿ ಉಂಟಾಗಿರುವುದಿಲ್ಲ. ಆದರೆ ನಾಗರಹೊಳೆ ವಲಯದ ಪ್ರದೇಶದಲ್ಲಿ ಮಾತ್ರ ಒಣ ಮತ್ತು ಹೂ ಬಿಟ್ಟ ಬಿದಿರು, ಒಣಗಿದ ಗಿಡ–ಮರಗಳು ಉರುವಲು ಕಟ್ಟಿಗೆ ಮುಂತಾದವುಗಳು ಇದ್ದುದ್ದರಿಂದ ಹಾಗೂ ಗಾಳಿಯ ವೇಗವು ಹೆಚ್ಚಾಗಿದ್ದುದರಿಂದ 460.00 ಹೆ. (ನಾಲ್ಕು ನೂರ ಅರವತ್ತು ಹೆಕ್ಟೇರ್) ಪ್ರದೇಶದಲ್ಲಿ ಬೆಂಕಿ ಹರಡಲು ಕಾರಣವಾಗಿದ್ದು, ಹರಡಿರುವ ಬೆಂಕಿಯಿಂದ ಸದರಿ ಪ್ರದೇಶದಲ್ಲಿದ್ದ ಉರಗ ಸಂತತಿ, ಮೊಟ್ಟೆಗಳು ಮತ್ತು ಸಣ್ಣ ಪ್ರಾಣಿ/ಪಕ್ಷಿಗಳು, ಹುಳು/ಕೀಟ ಮುಂತಾದವುಗಳಿಗೆ ಮಾತ್ರ ಹನಿ ಉಂಟಾಗಿದೆ.

ಇ) ಅರಣ್ಯ ಪ್ರದೇಶಕ್ಕೆ ಬಿದ್ದ ಬೆಂಕಿಯು ಹೆಚ್ಚಾಗಿ ನೆಲ ಮಟ್ಟದ ಬೆಂಕಿಯಾಗಿದ್ದು, ಇದರಿಂದ ಇಲಾಖೆಯ ಯೋಜನೆಗಳ ಅನುಷ್ಠಾನಕ್ಕೆ ನಷ್ಟವಾಗಿರುವುದಿಲ್ಲ. ಆದ್ದರಿಂದ ಯೋಜನೆಗಳ ಮುಂದಿನ ಗತಿಯ ಬಗ್ಗೆ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ನಾಗರಹೊಳೆ ಮತ್ತು ಬಂಡೀಪುರ ಅರಣ್ಯ ಪ್ರದೇಶದಲ್ಲಿ ಕಾಡ್ಗಿಚ್ಚಿನಿಂದ ಟೈಗರ್ ಪ್ರಾಜೆಕ್ಟ್‌ಗೆ ಯಾವುದೇ ತೊಂದರೆ ಉಂಟಾಗಿರುವುದಿಲ್ಲ. ಕಾಡ್ಗಿಚ್ಚಿನಿಂದ ಉಂಟಾಗುವ ತೊಂದರೆಗಳನ್ನು ತಡೆಯಲು/ನಿಭಾಯಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- ಬೆಂಕಿ ಲೈನುಗಳು ಮತ್ತು ಡಿಲೈನುಗಳ ನಿರ್ವಹಣೆ.
- ಬೆಂಕಿ ರಕ್ಷಣಾ ಕೇಂದ್ರಗಳು ಮತ್ತು ಬೆಂಕಿ ಗುರುತಿಸುವ ಕೇಂದ್ರಗಳ ಸ್ಥಾಪನೆ.
- ಬೆಂಕಿ ರಕ್ಷಣಾ ಕಾರ್ಯಕ್ಕೆ ವಾಹನಗಳ ಬಳಕೆ.
- ಪರಿಸರ ಅಭಿವೃದ್ಧಿ ಸಮಿತಿ ಮತ್ತು ಸ್ವಸಹಾಯ ಸಂಘದ ಸದಸ್ಯರುಗಳಿಗೆ ಮತ್ತು ಅಭಯಾರಣ್ಯದ ಆಸುಪಾಸಿನ ಗ್ರಾಮಸ್ಥರಿಗೆ ಮತ್ತು ಯುವಕರಿಗೆ ಬೆಂಕಿ ರಕ್ಷಣೆ ಬಗ್ಗೆ ಅರಿವು ಮೂಡಿಸಿ ಸದರಿಯವರ ಸಹಭಾಗಿತ್ವದಲ್ಲಿ ಬೆಂಕಿ ನಂದಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.
- ಕಾಡಿಗೆ ಬೆಂಕಿ ಹಚ್ಚುವುದರಿಂದ ಆಗುವ ಅನಾಹುತಗಳ ಬಗ್ಗೆ ಪೋಸ್ಟರ್ ಮತ್ತು ಭಿತ್ತಿಪತ್ರಗಳ ಮೂಲಕ ಪ್ರಚಾರ ಮಾಡಲಾಗುತ್ತಿದೆ.
- ಮುಂಚೂಣಿ ಸಿಬ್ಬಂದಿ ವರ್ಗ ಹಾಗೂ ಇತರೆ ರಕ್ಷಣಾ ತಡೆಶಿಬಿರಗಳ ಕಾವಲುಗಾರರು ರಕ್ಷಣಾ ಕಾರ್ಯ ನಿರ್ವಹಿಸುತ್ತಿದ್ದಾರೆ.

ಊ) ಅರಣ್ಯ ಪ್ರದೇಶಕ್ಕೆ ಬೆಂಕಿ ಬೀಳುತ್ತಿರುವುದು ಬಹುತೇಕ ಕಿಡಿಗೇಡಿಗಳ ಕೃತ್ಯವಾಗಿರುತ್ತದೆ ಹಾಗೂ ಅರಣ್ಯ ಪ್ರದೇಶಕ್ಕೆ ಬೆಂಕಿ ಬೀಳಲು ಇನ್ನಿತರ ಕಾರಣಗಳು ಇರುತ್ತವೆ. ವಿವರ ಕೆಳಕಂಡಂತೆ ಇರುತ್ತದೆ.

1. ಕಾಡಂಚಿನ ಗ್ರಾಮಗಳ ರೈತರುಗಳು ತಮ್ಮ ಜಾನುವಾರು ಗಳಿಗೆ ಮುಂದಿನ ಮಳೆಗಾಲದಲ್ಲಿ ಚೆನ್ನಾಗಿ ಹುಲ್ಲು ಬೆಳೆಯಲಿ ಎಂಬ ತಪ್ಪು ಕಲ್ಪನೆಯಿಂದ ಇಲಾಖಾ ಸಿಬ್ಬಂದಿಗಳ ಕಣ್ ತಪ್ಪಿಸಿ ಬೆಂಕಿ ಹಚ್ಚುತ್ತಾರೆ.
2. ಅರಣ್ಯ ಮೊಕದ್ದಮೆಗಳಲ್ಲಿ ತೊಡಗಿದಂತಹ ಆರೋಪಿ ಗಳನ್ನು ಇಲಾಖಾ ಸಿಬ್ಬಂದಿಗಳ ಮೂಲಕ ನ್ಯಾಯಾ ಲಯಕ್ಕೆ ಒಪ್ಪಿಸಿದಾಗ, ಇಲಾಖಾ ಸಿಬ್ಬಂದಿಗಳ ಮೇಲಿನ ದ್ವೇಷದಿಂದ ಬೆಂಕಿ ಹಚ್ಚುವ ಪ್ರಕರಣಗಳು ಸಂಭವಿ ಸುತ್ತಿರುತ್ತದೆ.